ಕೃಷಿ ಆಯುಕ್ತರ ಕಛೇರಿ
1475
21 AUG 2013
ಶೇಷಾದ್ರಿ ರಸ್ತೆ, ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯ 2013-14ನೇ ಸಾಲಿನಲ್ಲಿ ಚಾಲ್ತಿಯೋಜನೆಗಳಿಗೆ ಎರಡನೇ ತ್ರೈಮಾಸಿಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/30/ಕೃಯೋಕಾ/2013, ಬೆಂಗಳೂರು, ದಿನಾಂಕ: 19.08.2013.**

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಕೃಇ/27/ಕೃಯೋಕಾ/2013, ದಿನಾಂಕ:05-04-2013,
2. ಸರ್ಕಾರದ ಆದೇಶ ಸಂಖ್ಯೆ:ಕೃಇ/27/ಕೃಯೋಕಾ/2013, ದಿನಾಂಕ: 06-08-2013
3. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಪಿಎಲ್‌ಎನ್3/ತಾಂ-1/ಅನುದಾನ ಬಿಡುಗಡೆ/2013-14, ದಿ:25-07-2013.

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖ(1)ರಲ್ಲಿ 2012-13ನೇ ಸಾಲಿನಲ್ಲಿ ಕೃಷಿ ಇಲಾಖೆಯ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2013-14ನೇ ಸಾಲಿನಲ್ಲಿ ಮುಂದುವರೆಸಲು ಅನುಮತಿಸಿದೆ ಹಾಗೂ ಉಲ್ಲೇಖ(2)ರಲ್ಲಿ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯದನ್ವಯ ಆಯವ್ಯಯ ಸಂಪುಟ-6 ರಲ್ಲಿ ಕೃಷಿ ಇಲಾಖೆಯ ರಾಜ್ಯ ವಲಯಗಳ ಯೋಜನೆಗಳಲ್ಲಿನ ಹಾಲಿ 20 ವಿವಿಧ ಲೆಕ್ಕಶೀರ್ಷಿಕೆಗಳಲ್ಲಿನ ಯೋಜನೆಗಳನ್ನು 05 ರಾಜ್ಯವಲಯ ಯೋಜನೆಗಳನ್ನಾಗಿ ಸಮ್ಮಿಲನಗೊಳಿಸಿ ಮಾರ್ಪಡಿಸಿ ದಿನಾಂಕ: 01.04.2013 ರಿಂದ 31.03.2014 ರವರೆಗೆ ಮುಂದುವರೆಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ ಉಲ್ಲೇಖ(3)ರ ಪತ್ರದಲ್ಲಿ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯದನ್ವಯ ಮೊದಲನೇ ಹಾಗೂ ಎರಡನೇ ತ್ರೈಮಾಸಿಕದ ಅನುದಾನ ಒಟ್ಟು ರೂ. 42863.98 ಲಕ್ಷಗಳಾಗಿದ್ದು (ಸುವರ್ಣ ಭೂಮಿ ಹಾಗೂ ಕೃಷಿ ಬಂಡವಾಳ ಹೂಡಿಕೆ ನಿಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ). ಅದರಲ್ಲಿ ಈಗಾಗಲೇ ಮೊದಲನೇ ತ್ರೈಮಾಸಿಕಕ್ಕೆ ರೂ. 14695.82 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಎರಡನೇ ತ್ರೈಮಾಸಿಕ್ಕೆ ರೂ. 28243.16 ಲಕ್ಷಗಳನ್ನು ಬಿಡುಗಡೆ ಮಾಡಬೇಕಿದ್ದು ಸುವರ್ಣ ಭೂಮಿ ಹಾಗೂ ಕೃಷಿ ಬಂಡವಾಳ ಹೂಡಿಕೆ ನಿಧಿ ಕಾರ್ಯಕ್ರಮಗಳಿಗೆ ಪ್ರತ್ಯೇಕ ಅನುದಾನ ಬಿಡುಗಡೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕಿರುವುದರಿಂದ ಈ ಯೋಜನೆಗಳನ್ನು ಹೊರತುಪಡಿಸಿ ಎರಡನೇ ತ್ರೈಮಾಸಿಕದ ಅನುದಾನವಾದ ರೂ. 28243.16 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸುವಂತೆ ಕೃಷಿ ಆಯುಕ್ತರು ಪ್ರಸ್ತಾವನೆ ಸಲ್ಲಿಸಿರುತ್ತಾರೆ

ಕೃಷಿ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

..2..

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆಗಳ ವಿವಿಧ 9 ರಾಜ್ಯವಲಯ ಯೋಜನೆಗಳಿಗೆ **ರೂ. 28243.16 ಲಕ್ಷಗಳನ್ನು (ಇಪ್ಪತ್ತೆಂಟು ಸಾವಿರದ ಎರಡು ನೂರಾ ನಲವತ್ತಮೂರು ಲಕ್ಷದ ಹದಿನಾರು ಸಾವಿರ ರೂಪಾಯಿಗಳು ಮಾತ್ರ)** ಎರಡನೆ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ. 2013-14ನೇ ಸಾಲಿನ ಎರಡನೇ ತ್ರೈಮಾಸಿಕದಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆಗಳ ರಾಜ್ಯವಲಯ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

| ಕ್ರ. ಸಂ | ಯೋಜನೆ | ಲೆಕ್ಕ ಶೀರ್ಷಿಕೆ | 2013-14ರಲ್ಲಿ ಒದಗಿಸಿರುವ ಪರಿಷ್ಕೃತ ಆಯವ್ಯಯ | ಮೊದಲನೇ ತ್ರೈಮಾಸಿಕಕ್ಕೆ ಬಿಡುಗಡೆಯಾಗಿರುವ ಅನುದಾನ | ಮೊದಲನೇ ಮತ್ತು ಎರಡನೇ ತ್ರೈಮಾಸಿಕದ ಅನುದಾನ | ಎರಡನೇ ತ್ರೈಮಾಸಿಕಕ್ಕೆ ಬಿಡುಗಡೆ ಗೊಳಿಸಲಾದ ಅನುದಾನ |
|---|---|---|---|---|---|---|
| 1 | ಕೃಷಿ ನಿರ್ದೇಶನಾಲಯ | 2401-00-001-1-01 | 4000.00 | 750.00 | 2000.00 | 1250.00 |
| 2 | ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ | 2401-00-103-0-15 | 54292.41 | 9033.33 | 26571.21 | 17562.88 |
| 3 | ಸಾವಯವ ಕೃಷಿ | 2401-00-104-0-12 | 4480.54 | 0.00 | 2240.27 | 2240.27 |
| 4 | ಮಣ್ಣು ಆರೋಗ್ಯ ಕೇಂದ್ರಗಳು | 2401-00-105-0-01 | 300.00 | 100.00 | 150.00 | 50.00 |
| 5 | ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ | 2401-00-107-0-03 | 700.00 | 162.50 | 350.00 | 187.50 |
| 6 | ವಿಸ್ತೃತ ನೀರಾವರಿ ಯೋಜನೆ | 2401-00-108-1-15 | 10000.00 | 2500.00 | 5000.00 | 2500.00 |
| 7 | ಬೇಸಾಯ ಸಂಬಂದಿತ ಚಟುವಟಿಕೆಗಳು | 2401-00-109-0-21 | 9270.00 | 1958.33 | 4635.00 | 2726.67 |
| 8 | ಇತರೆ ಕೃಷಿ ಯೋಜನೆಗಳು | 2401-00-800-1-40 | 15900.00 | 191.66 | 650.00 | 458.34 |
| 9 | ರಾಜ್ಯ ಯೋಜನೆಗಳು | 4401-00-001-1-01 | 2535.00 | 0.00 | 1267.50 | 1267.50 |
| | ಒಟ್ಟು | | **101477.95** | **14695.82** | **42863.98** | **28243.16** |

ರಾಜ್ಯವಲಯ ಯೋಜನೆಗಳಡಿ ಆಗಿಂದ್ದಾಗೆ ಹೊರಡಿಸಲಾಗುವ ಮಾರ್ಗ ಸೂಚಿಗಳನ್ನು ಅನುಸರಿಸಿ ಕೃಷಿ ಆಯುಕ್ತರು ಯೋಜನೆಗಳನ್ನು ಅನುಷ್ಟಾನಗೊಳಿಸುವುದು. ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ/01/ಟಿಎಫ್‌ಪಿ/2013, ದಿನಾಂಕ:10-05-2013ರ ಆದೇಶದಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಟಿಪ್ಪಣಿ ಸಂ:ಕೃಇ/83/ಆಂಆಸ/2013, ದಿನಾಂಕ:13-08-2013 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಜೆ.ಆರ್. ವಿಶ್ವನಾಥಾಚಾರ್),** 19/8
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ (ಯೋಜನೆ).**

ಪ್ರತಿಯನ್ನು:-

1) ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
2) ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು
4) ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
5) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
6) ಸರ್ಕಾರಧ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು
7) ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ (ಕೃಷಿ ಸೇವೆ).
8) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
9) ಸರ್ಕಾರದ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಹಾಗೂ ಕಟಾವು ತಂತ್ರಜ್ಞಾನ), ಕೃಷಿ ಇಲಾಖೆ, ಇವರ ಆಪ್ತ ಶಾಖೆ.
10) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
11) ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
12) ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
13) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ರವರಿಗೆ ಮಾಹಿತಿಗಾಗಿ ನೀಡಲಾಗಿದೆ.(ಕೃಷಿ ಆಯುಕ್ತರ ಮುಖಾಂತರ).
14) ಶಾಖಾಧಿಕಾರಿ, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.
15) ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.